ನಂ. 1* ಕನ್ನಡ ದಿನಪತ್ರಿಕೆ
ವಿಜಯವಾಣಿ
● VIJAYAVANI » HUBBALLI
ಶುಕ್ರವಾರ 1 ಡಿಸೆಂಬರ್ 2023
1 DECEMBER 2023

ಹುಬ್ಬಳ್ಳಿಯಿಂದ ತಿರುಪತಿಗೆ ಪಾದಯಾತ್ರೆ

ಹುಬ್ಬಳ್ಳಿ: ಇಲ್ಲಿಯ ಉಣಕಲ್ ಕ್ರಾಸ್ ನಿವಾಸಿಗಳಾದ ಮಂಜುನಾಥ ಕಿರೇಸೂರ, ನಾರಾಯಣ ಕಿರೇಸೂರ ಅವರು ತಿರುಪತಿವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಡಿ. 2ರಂದು ಬೆಳಗ್ಗೆ 6ಕ್ಕೆ ಉಣಕಲ್ ಕ್ರಾಸ್‌ನಲ್ಲಿನ ವೆಂಕಟಾದ್ರಿ ಹೈಟ್ಸ್ ಕಿರೇಸೂರ ಕಾಂಪ್ಲೆಕ್ಸ್‌ನಿಂದ ಪಾದಯಾತ್ರೆ ಪ್ರಾರಂಭವಾಗಲಿದೆ. ಕೆಲವು ಜನರು ಹುಬ್ಬಳ್ಳಿ ಚನ್ನಮ್ಮ ಸರ್ಕಲ್‌ವರೆಗೆ ಹಾಗೂ ನಗರ ಪ್ರದೇಶ ದಾಟುವವರೆಗೂ ಪಾದಯಾತ್ರೆಯಲ್ಲಿ ಜತೆಗೂಡಿ ವೆಂಕಟೇಶ್ವರನ ಸೇವೆಗೈಯಲಿದ್ದಾರೆ. ಉಣಕಲ್ಲ, ಕೇಶ್ವಾಪುರ, ಧಾರವಾಡ ಮತ್ತು ನವಲಗುಂದ ತಾಲೂಕಿನ ಚಿಲಕವಾಡ, ಶಿಶುವಿನಹಳ್ಳಿ ವಿವಿಧೆಡೆಯ ಜನರು ಇವರೊಂದಿಗೆ ಪಾದಯಾತ್ರೆಯಲ್ಲಿ ಕೂಡಿಕೊಳ್ಳಲಿದ್ದಾರೆ. ಇದು ಇವರ ಮೂರನೇ ವರ್ಷದ ಪಾದಯಾತ್ರೆಯಾಗಿದ್ದು, ಸುಮಾರು 630 ಕಿ.ಮೀ. ದೂರ ಪ್ರಯಾಣಕ್ಕೆ 20 ದಿನಗಳವರೆಗೆ ಪಾದಯಾತ್ರೆ ನಡೆಸಲಿದ್ದಾರೆ. ಡಿ. 23ರಂದು ತಿರುಪತಿ ತಲುಪಿ ವೈಕುಂಠ ಏಕಾದಶಿಯ ದಿನದಂದು ದೇವರ ದರ್ಶನ ಪಡೆಯಲಿದ್ದಾರೆ.

ಕನಕರ ಭಾವಚಿತ್ರಕ್ಕೆ ಪೂಜೆ

ಹುಬ್ಬಳ್ಳಿ: ಹು-ಧಾ ಮಹಾನಗರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ದಾಸಶ್ರೇಷ್ಠ ಕನಕದಾಸರ ಜಯಂತಿ ನಿಮಿತ್ತ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪಕ್ಷದ ಧಾರವಾಡ ವಿಭಾಗ ಪ್ರಭಾರಿ ಲಿಂಗರಾಜ ಪಾಟೀಲ, ಮುಖಂಡ ಸಿದ್ದು ಮೊಗಲಿಶೆಟ್ಟರ್, ಜಿಲ್ಲಾ ವಕ್ತಾರ ರವಿ ನಾಯಕ, ಗೌರಿ ಪವಾರ, ಸುಷ್ಮಿತಾ ಕಾಳೆ, ಅನುಷಾ ವಾಲಿ, ವಿಷಾದ ಮುಳಗುಂದ, ಸುಧಾ ಸುಲ್ತಾನಪುರ್, ನಿಂಗಪ್ಪ ಮುಂದಿನಮನಿ ಇದ್ದರು.

ಸಕ್ರಿ ಕಾನೂನು ಕಾಲೇಜ್: ಜೆಎಸ್‌ಎಸ್ ಸಕ್ರಿ ಕಾನೂನು ಕಾಲೇಜಿನಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಪ್ರಾಚಾರ್ಯೆ ಡಾ. ರೂಪಾ ಇಂಗಳಹಳ್ಳಿ, ಪ್ರೊ. ಬಾಬುಲಾಲ್ ದರಗದ್, ಪ್ರೊ. ಶ್ರೀಶೈಲ ಮುಧೋಳ, ಸುರೇಶ ಲಿಂಬಿಕಾಯಿ, ಶೈಲಜಾ ಹಗೇದಾಳ್, ಸುರೇಶ ಲಮಾಣಿ, ಇತರರು ಇದ್ದರು.

ನೈಋತ್ಯ ರೈಲ್ವೆ G20
ಇ-ಟೆಂಡರು ಸೂಚನೆ ಸಂ.: CAO/CN/BNC/145/2023
ದಿನಾಂಕ: 07.02.2023, ರಂದು ನಿರ್ಧಿಷ್ಟಪಡಿಸಿದಂತೆ ಮುಕ್ತಾಯಗೊಳಿಸಲು ಕರೆಯಲಾದ ಟೆಂಡರ್ ಅನ್ನು ರದ್ದುಗೊಳಿಸಲಾಗಿದೆ

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಧಾರವಾಡ – ಬೆಳಗಾವಿ ಹೊಸ ಲೈನ್ ಯೋಜನೆಯಡಿ (73.10 ಕಿಮೀ), ಇಪಿಸಿ ಮಾದರಿಯಲ್ಲಿ ದೂರಸಂಪರ್ಕ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನೊಳಗೊಂಡಂತೆ ಕ್ಯಾರಕೊಪ್ಪ (ಹೊರತು) (ಚೈ: 6100) ಮತ್ತು ಮುಮ್ಮಿಗಟ್ಟಿ (ಒಳಪಡಿಸಿ) (ಚೈ: 17800) (11.700 ಕಿಮೀ) ನಡುವಿನ ಹೊಸ ಬ್ರಾಡ್‌ಗೇಜ್ ಲೈನ್ ಟ್ರ್ಯಾಕ್‌ನ ನಿರ್ಮಾಣ. (ಟೆಂಡರು ಉಲ್ಲೇಖ ಸಂ. DWR-BGM-EPC-01)	ರೂ. 2,43,66,29,736/-

ಕೊನೆಗೊಳ್ಳುವ ದಿನಾಂಕ

ಪ್ರಸ್ತುತ	ಪರಿಷ್ಕರಣೆ
05.12.2023 (11:00 ಗಂಟೆಗೆ)	ಟೆಂಡರನ್ನು ರದ್ದುಪಡಿಸಲಾಗಿದೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ
ಬೆಂಗಳೂರು ದಂಡು
PUB/534/AAD/PRB/SWR/2023-24
South Western Railway - SWR | @SWRRLY | SWRRLY

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಭಿಪ್ರಾಯ | ಜಿಲ್ಲಾದ್ಯಂತ ದಾಸಶ್ರೇಷ್ಠರ ಜಯಂತ್ಯುತ್ಸವ

ಕನಕದಾಸರ ಬೋಧನೆ-ತತ್ವ ನಿತ್ಯ ಸತ್ಯ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಭಾರತದ ಮಹನೀಯರು, ಸಂತ ಶ್ರೇಷ್ಠರನ್ನು ಅವರ ಗುಣದ ಆಧಾರದ ಮೇಲೆ ಗೌರವಿಸಬೇಕು. ದಾಸ ಶ್ರೇಷ್ಠ ಕನಕದಾಸರು ತಮ್ಮ ಜೀವನ ಕ್ರಮ, ತತ್ವ ಬೋಧನೆ, ಸಾಹಿತ್ಯ ರಚನೆ, ಕೀರ್ತನೆಗಳ ಮೂಲಕ ಮಹಾದಾರ್ಶನಿಕರಾಗಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತದಿಂದ ಗುರುವಾರ ಆಯೋಜಿಸಿದ್ದ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನಕದಾಸರು ಸಮಾನತೆಯ ಹರಿಕಾರರು. ನಿತ್ಯ ಕಾಯಕದ ಸಂದೇಶ ಸಾರಿದರು. ನುಡಿದಂತೆ ನಡೆದು ಗುರು. ಸಮಾಜಕ್ಕೆ ದಾರಿದೀಪವಾದರು. ಸಾಮಾಜಿಕ ಬದಲಾವಣೆಗೆ ಅವರ ಸಾಹಿತ್ಯ ಪ್ರೇರಣೆ ಆಗಿದೆ. ಅವರ ಕೀರ್ತನೆಗಳಲ್ಲಿನ ಸಂದೇಶಗಳು ನಿತ್ಯ ಸತ್ಯವಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಮಾತನಾಡಿ, ಶ್ರೀ ಕನಕದಾಸರ ಜೀವನ, ತತ್ವಾದರ್ಶಗಳು ಇಂದಿನ ಸಮಾಜಕ್ಕೆ ಸ್ಫೂರ್ತಿದಾಯಕವಾಗಿವೆ. ಸಮಾಜದಲ್ಲಿ ಪರಸ್ಪರ ಸಾಮರಸ್ಯ, ಐಕ್ಯತೆ, ಸಹಜೀವನಕ್ಕೆ ಅವರ ಸಂದೇಶಗಳು ದಾರಿದೀಪ ಎಂದರು.

ಕಾನೂನು ತಜ್ಞ ಹಾಗೂ ಚಿಂತಕ ಡಾ. ಲೋಹಿತ್ ನಾಯ್ಕರ ಕನಕದಾಸರ ಕುರಿತು ವಿಶೇಷ ಉಪನ್ಯಾಸ ನೀಡಿದರು. ರಾಜೇಶ್ವರಿ ಸಾಲಗಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮನಸೂರ ರೇವಣಸಿದ್ಧೇಶ್ವರ ಮಹಾಮಠದ ಡಾ. ಬಸವರಾಜ ದೇವರು ಸಾನ್ನಿಧ್ಯ ವಹಿಸಿದ್ದರು. ಸಮಾಜದ ಹಿರಿಯರಾದ ಯಲ್ಲಮ್ಮ ನಾಯ್ಕರ, ಪಾಲಿಕೆ ಸದಸ್ಯರಾದ ವಿಜಯಾನಂದ ಶೆಟ್ಟಿ, ಶಿವು ಹಿರೇಮಠ, ಜ್ಯೋತಿ ಪಾಟೀಲ, ಶಂಕರ ಶೆಳಕೆ, ವಿಷ್ಣು ಕೊರ್ಲಹಳ್ಳಿ, ಇತರರಿದ್ದರು. ಕುಮಾರ ಬೆಕ್ಕೇರಿ ಸ್ವಾಗತಿಸಿದರು. ಬಸವರಾಜ ಕುಪ್ಪಸಗೌಡ ನಿರೂಪಿಸಿದರು. ದೇವರಾಜ ಕಂಬಳಿ ವಂದಿಸಿದರು.

ದಾಸ ಶ್ರೇಷ್ಠ ಕನಕದಾಸರ

ಧಾರವಾಡದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತದಿಂದ ಗುರುವಾರ ಆಯೋಜಿಸಿದ್ದ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪುಷ್ಪ ನಮನ ಸಲ್ಲಿಸಿದರು. ಡಾ. ಬಸವರಾಜ ದೇವರು, ದೇವರಾಜ ಕಂಬಳಿ, ಗೀತಾ ಸಿ.ಡಿ., ಇತರರಿದ್ದರು.

ಈದ್ಗಾ ಮೈದಾನದಲ್ಲಿ ಶ್ರೀರಾಮ ಸೇನೆಯಿಂದ ಜಯಂತಿ ಆಚರಣೆ

ಹುಬ್ಬಳ್ಳಿ: ನಗರದ ಕಿತ್ತೂರ ಚನ್ನಮ್ಮ ವೃತ್ತದ ಬಳಿಯ ಈದ್ಗಾ ಮೈದಾನದಲ್ಲಿ ಹುಬ್ಬಳ್ಳಿ ಧಾರವಾಡ ಜಿಲ್ಲಾ ಶ್ರೀರಾಮ ಸೇನಾ ವತಿಯಿಂದ ಗುರುವಾರ ಭಕ್ತ ಕನಕದಾಸ ಜಯಂತಿ ಆಚರಿಸಲಾಯಿತು.

ಸೇನಾ ಕಾರ್ಯಕರ್ತರು ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಬಳಿಕ ಪೂಜೆ ಸಲ್ಲಿಸಿದರು. ಜೈ ಶ್ರೀ ರಾಮ...ಬೋಲೋ ಭಾರತ ಮಾತಾ ಕೀ ಜೈ, ಭಕ್ತ ಕನಕದಾಸರಿಗೆ ಜಯವಾಗಲಿ.. ಎಂಬಿತ್ಯಾದಿ ಘೋಷಣೆ ಮೊಳಗಿಸಿದರು. ಶ್ರೀ ರಾಮ, ಜೈ ರಾಮ.. ಜೈ ಜೈ ರಾಮ... ಭಜನೆ ಹಾಡಿದರು. ಪ್ರಾರಂಭದಲ್ಲಿ ಗೋಮೂತ್ರ ಸಿಂಪಡಿಸಿ ಮೈದಾನ ಶುಚಿಗೊಳಿಸಲಾಯಿತು.

ಈದ್ಗಾ ಮೈದಾನದ ನಿರ್ದಿಷ್ಟ ಸ್ಥಳದಲ್ಲಿ 2 ಗಂಟೆಗಳ ಕಾಲ ಆಚರಣೆಗೆ ಹು-ಧಾ ಮಹಾನಗರ ಪಾಲಿಕೆ ಅನುಮತಿ ನೀಡಿತ್ತು. ಈದ್ಗಾ ಕಾಣದಂತೆ ತಗಡಿನ ಶೀಟ್ ಮತ್ತು ಪರದೆಯಿಂದ ಮರೆಮಾಚಲಾಗಿತ್ತು. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಖುದ್ದು ಡಿಸಿಪಿ ರಾಜೀವ ಎಂ. ಸ್ಥಳದಲ್ಲಿ ಇದ್ದರು. ಸೇನೆಯ ಕಾರ್ಯಕರ್ತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿ ಇದ್ದರು.

ಪಾಲಿಕೆಯಿಂದ ಸುಲಿಗೆ, ಹಗಲು ದರೋಡೆ: ಶ್ರೀರಾಮ ಸೇನಾ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಮಾತನಾಡಿ, ಈದ್ಗಾ ಮೈದಾನ ಪಾಲಿಕೆ ಸುಪರ್ದಿಗೆ ಬರುವಲ್ಲಿ ನಮ್ಮಂಥವರ ಹೋರಾಟವೇ ಕಾರಣ. ನಾವು ಜೈಲು ವಾಸ, ಗೋಲಿಬಾರ್, ಪೊಲೀಸರಿಂದ ಲಾಟಿ ಏಟು ತಿಂದಿದ್ದೇವೆ. ಈಗ ಪಾಲಿಕೆ ಇಲ್ಲಿ 2 ತಾಸು ಕಾರ್ಯಕ್ರಮ ನಡೆಸಲು 10 ಸಾವಿರ ರೂ. ಶುಲ್ಕ ಪಡೆದಿರುವುದು ಸುಲಿಗೆ, ಹಗಲು ದರೋಡೆ. ವರ್ಷಕ್ಕೆ 2 ಬಾರಿ ನಮಾಜ್ ಮಾಡಲು ಎಷ್ಟು ಶುಲ್ಕ ಪಡೆಯುತ್ತಾರೆ ಎಂದು ನಾವು ಕೇಳಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ಮುಂದೆ ನಾವು 1 ರೂ. ಸಹ ಕೊಡುವುದಿಲ್ಲ. ಶುಲ್ಕವಿಲ್ಲದೆ ನಮಗೆ ಮೈದಾನ ಬಿಟ್ಟುಕೊಡಬೇಕು. ಈದ್ಗಾ ಮೈದಾನದಲ್ಲಿ ಕನಕದಾಸ ಜಯಂತಿ ಆಚರಣೆಗೆ ಅನುಮತಿ ನೀಡಬೇಕೆಂದು ವಾರದ ಹಿಂದೆಯೇ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದೇವು. ಬುಧವಾರ ರಾತ್ರಿ 9 ಗಂಟೆಗೆ ಅನುಮತಿ ನೀಡಿದ್ದಾರೆ. ಇದು ಭಕ್ತ ಕನಕದಾಸರಿಗೆ ಅವಮಾನ ಮಾಡಿದಂತೆ. ಈ ರೀತಿಯಲ್ಲಾದ ಪಾಲಿಕೆಯ ನಿರ್ಲಕ್ಷ್ಯ ಧೋರಣೆ ಅಕ್ಷಮ್ಯ. ಇನ್ನು ಮುಂದೆ ವಿಳಂಬ ಮಾಡದೇ ತಕ್ಷಣ ಅನುಮತಿ ನೀಡುವಂತಾಗಬೇಕು. ವಿಳಂಬ ಮಾಡಿದರೆ ನಾವು ಸುಮ್ಮನೆ ಕೂಡುವುದಿಲ್ಲ ಎಂದರು.

ಜಿಲ್ಲಾಧ್ಯಕ್ಷ ಅಣ್ಣಪ್ಪ ದಿವಟಗಿ, ಮಂಜುನಾಥ ಕಾಟೀಗರ, ಬಸವರಾಜ ಗೌಡರ್, ಬಸು ದುರ್ಗದ, ಪ್ರವೀಣ ಮಾಳೇದಕರ, ಮಹಾಂತೇಶ ತೋಂಗಳಿ, ಇತರರು ಇದ್ದರು.

ಹುಬ್ಬಳ್ಳಿ ಕಿತ್ತೂರ ಚನ್ನಮ್ಮ ವೃತ್ತದ ಬಳಿಯ ಈದ್ಗಾ ಮೈದಾನದಲ್ಲಿ ಶ್ರೀರಾಮ ಸೇನಾ ವತಿಯಿಂದ ಗುರುವಾರ ಭಕ್ತ ಕನಕದಾಸ ಜಯಂತಿ ಆಚರಿಸಲಾಯಿತು. ಗಂಗಾಧರ ಕುಲಕರ್ಣಿ, ಅಣ್ಣಪ್ಪ ದಿವಟಗಿ, ಮಂಜುನಾಥ ಕಾಟೀಗರ, ಬಸವರಾಜ ಗೌಡರ್, ಬಸು ದುರ್ಗದ, ಪ್ರವೀಣ ಮಾಳೇದಕರ, ಮಹಾಂತೇಶ ತೋಂಗಳಿ, ಇತರರು ಇದ್ದರು.

ರೇಣುಕಾಚಾರ್ಯ ಮಂದಿರದಲ್ಲಿ ಕಾರ್ತಿಕ ದೀಪೋತ್ಸವ ಇಂದು

ಹುಬ್ಬಳ್ಳಿ: ವಿದ್ಯಾನಗರದ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಡಿ. 1ರಂದು ಸಂಜೆ 6 ಗಂಟೆಗೆ ಕಾರ್ತಿಕೋತ್ಸವ, ಸಾಧಕರಿಗೆ ಸನ್ಮಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಗದ್ಗುರು ರಂಭಾಪುರೀಶ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ವಿಶ್ವನಾಥ ಹಿರೇಗೌಡರ ತಿಳಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ತಿಕ ದೀಪೋತ್ಸವದ ಬಳಿಕ ಆಯೋಜಿಸಿರುವ ಧರ್ಮ ಸಭೆಯ ಸಾನ್ನಿಧ್ಯವನ್ನು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ವಹಿಸುವರು. ಸುಳ್ಳ ಪಂಚಗೃಹ ಹಿರೇಮಠದ ಶ್ರೀ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು ನೇತೃತ್ವ ವಹಿಸುವರು. ಅಮ್ಮಿನಭಾವಿ ಪಂಚಗೃಹ ಹಿರೇಮಠದ ಶ್ರೀ ಅಭಿನವ ಶಾಂತಲಿಂಗ ಶಿವಾಚಾರ್ಯರು ಉಪದೇಶಾಮೃತ ನೀಡುವರು ಎಂದು ವಿವರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸುವರು. ಮೇಯರ್ ವೀಣಾ ಬರದ್ವಾಡ, ಶಾಸಕ ಮಹೇಶ ಟೆಂಗಿನಕಾಯಿ, ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ಹುಬ್ಬಳ್ಳಿ ತಾಲೂಕು ಘಟಕದ ಅಧ್ಯಕ್ಷ ಪ್ರಕಾಶ ಬೆಂಡಿಗೇರಿ, ಪಾರ್ವತಿ ಮಹಿಳಾ ಅಭಿವೃದ್ಧಿ ಮಂಡಳದ ಅಧ್ಯಕ್ಷೆ ಇಂದುಮತಿ ಮಾನ್ವಿ ಪಾಲ್ಗೊಳ್ಳುವರು. ರೈತ ದ್ಯಾಮನಗೌಡ ಪಾಟೀಲ, ಗಾಯಕ ಹನಮಂತ ಲಮಾಣಿ, ವಿಜ್ಞಾನಿ ಎನ್. ಆರ್. ಬಾಣಾಪುರ, ಕ್ರೀಡಾಪಟು ದೇವಪ್ಪ ಮೋರೆ ಅವರನ್ನು ಸನ್ಮಾನಿಸಲಾಗುವುದು. ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕ ಗಳಿಸಿದ ಬಾಲಾಜಿ ಕೃಷ್ಣ, ಸಹನಾ ಪತ್ತಾರ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಯೀಸ್ ಗೋಣಿ, ಸೌರಭ ನಾಯ್ಕ ಅವರನ್ನು ಪುರಸ್ಕರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ ಸುಳ್ಳದ, ಸಂಕಪ್ಪ ಕಮ್ಮಾರ, ಇತರರು ಇದ್ದರು.

ಜಿಪಂ ಉಸ್ತುವಾರಿಗೆ ವಿರೋಧ

ಧಾರವಾಡ: ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನು ಜಿಪಂ ಉಸ್ತುವಾರಿಗೆ ವಹಿಸುವುದನ್ನು ವಿರೋಧಿಸಿ, ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಚಾರ್ಯರು, ಉಪನ್ಯಾಸಕರು, ದೈಹಿಕ ಶಿಕ್ಷಣ ಉಪನ್ಯಾಸಕರು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರ ಮೂಲಕ ಸರ್ಕಾರಕ್ಕೆ ಮನವಿ ರವಾನಿಸಿದರು. ಡಿ. ಹನುಮಂತಪ್ಪ, ಡಿ.ಬಿ. ತಹಸೀಲ್ದಾರ್, ಸಂದೀಪ ಬೂದಿಹಾಳ, ಬಸವರಾಜ ದೇವರಮನಿ, ಇತರರಿದ್ದರು.

ICICI Home Finance | **ಕಾರ್ಪೊರೇಟ್ ಕಚೇರಿ:** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ(ಪೂರ್ವ), ಮುಂಬೈ -400059, ಭಾರತ
ಶಾಖಾ ವಿಳಾಸ: 1ನೇ ಮಹಡಿ, ನಂ. 181, ಸುಂದರಿ ಅರ್ಮದಲೆ, ವೈಟ್‌ಫಿಲ್ಡ್ ಮೇನ್ ರೋಡ, ವೈಟ್‌ಫಿಲ್ಡ್, ಬೆಂಗಳೂರು – 560066
(ನಿಯಮ 8 (6) ರ ನಿಬಂಧನೆ ನೋಡಿ)
ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ನೋಟಿಸ್
ಹಣಕಾಸು ಆಸ್ತಿಗಳ ಸಂರಕ್ಷಣೆ ಮತ್ತು ಪುನರ್‌ರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ಮತ್ತು ನಿಯಮ 8(6) ಜೊತೆ ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ರಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸ್.
ಈ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಮುಖವಾಗಿ ಕೆಳಗೆ ಸೂಚಿಸಿರುವ ಸಾಲಗಾರ(ರು) ಮತ್ತು ಜಾಮೀನುದಾರ(ರು) ರಿಗೆ ಪ್ರಕಟಣೆ ನೀಡುವುದೇನೆಂದರೆ ಈ ಕೆಳಗೆ ಸೂಚಿಸಿರುವ ಸ್ಥಿರ ಸ್ವತ್ತುಗಳನ್ನು ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ/ಹೊಣೆ ಯಾಗಿದ್ದು, ಐಸಿಐಸಿಐ ಹೊಂ ಫಿನಾನ್ಸ್ ಕಂಪನಿ ಲಿ., ರವರ ಅಧೀಕೃತ ಅಧಿಕಾರಿಯವರು **ಭೌತಿಕ ಸ್ವಾಧೀನ** ಹಂತದನುಸಾರ ಸ್ವಾಧೀನ ಪಡೆದುಕೊಂಡು, ಸದರೀ ಸ್ವತ್ತನ್ನು ''ಯಾವುದು ಆಧಾರ ವಾಗಿದೆಯೋ ಅದು'', ''ಏನು ಇದೆಯೋ ಅದು'', ''ಯಾವುಗಳು ಇದೆಯೋ ಅವುಗಳು'' ಆಧಾರದ ಮೇಲೆ ಈ ಕೆಳಗಿನ ಸಂಕ್ಷಿಪ್ತ ವಿವರಗಳಂತೆ ಮಾರಾಟ ಮಾಡಲಾಗುವುದೆಂದು ಪ್ರಕಟಣೆ ನೀಡಲಾಗಿದೆ.

ಕ್ರ. ಸಂ	ಸಾಲಗಾರ(ರು)/ಸಹ-ಸಾಲಗಾರರು/ ಜಾಮೀನುದಾರರ/ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲ ಖಾತೆ ಸಂ.	ಋಣಭಾರಗಳೊಂದಿಗೆ, ಯಾವುದಾದರೂ ಇದ್ದಲ್ಲಿ ಭದ್ರತಾ ಆಸ್ತಿ(ಗಳ) ವಿವರಗಳು	ಬಾಕಿ ಮೊತ್ತ	ಮೀಸಲು ಬೆಲೆ ಭದ್ರತಾ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(A)	(B)	(C)	(D)	(E)	(F)	(G)
1.	ಪುಷ್ಪಾ ಬಹೆಟಿ (ಸಾಲಗಾರ) ವಿವೇಕ್ ರಾಜಂದ್ರ ಬಹೆಟಿ (ಸಹ ಸಾಲಗಾರ) ಮಾಳತೇಶ ಮಾಳಗಿ (ಜಾಮೀನುದಾರ) ಸಾಲ ಖಾತೆ ಸಂಖ್ಯೆ LHHBL00001351358	ಹಳಿಯಾಳ ಗ್ರಾಮ, ಸರ್ವೆ ನಂ. 112/2ಬಿ/3ಬಿ, ಶ್ರೀ ಲಕ್ಷ್ಮೀ ವೆಂಕಟೇಶ್ವರ ಲೇಔಟ್, ಹುಬ್ಬಳ್ಳಿ ತಾಲೂಕ ಜಿಲ್ಲೆ ಧಾರವಾಡ, ಹುಬ್ಬಳ್ಳಿ-580030 ಇಲ್ಲಿರುವ ಪ್ಲಾಟ್ ನಂ. 08 ಮತ್ತು 09	ರೂ. 15,93,038/- ನವೆಂಬರ್ 17, 2023	ರೂ. 14,00,555/- ರೂ. 1,40,060/-	ಡಿಸೆಂಬರ್ 11, 2023 ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	ಡಿಸೆಂಬರ್ 19, 2023 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ

ಆನ್‌ಲೈನ್ ಹರಾಜನ್ನು ವೆಬ್‌ಸೈಟ್ ನಮ್ಮ ಹಾರಾಜಿನ ಏಜನ್ಸಿಯವರಾದ **ಗ್ಲೋಬ್‌ಟೆಕ್** ರವರ (URL Link-https://BestAuctionDeal.com) ಮೂಲಕ ನಡೆಸಲಾಗುವುದು. ಅಡಮಾನದಾರರಿಗೆ / **ಡಿಸೆಂಬರ್** 18, 2023 ರಂದು **ಸಂಜೆ 5.00 ಗಂಟೆಯೊಳಗೆ** ತಿಳಿಸಿರುವ ಒಟ್ಟಾರೆ ಬಾಕಿ ಮೊತ್ತವನ್ನು ಪಾವತಿಸಲು ಅಡಮಾನದಾರರಿಗೆ ಒಂದು ಅಂತಿಮ ಅವಕಾಶವನ್ನು ನೀಡಲಾಗಿದೆ. ಇಲ್ಲವಾದಲ್ಲಿ ಮೇಲಿನ ವೇಳಾ ಪಟ್ಟಿಯಂತೆ ಈ ಸದರಿ ಸ್ವತ್ತನ್ನು ಮಾರಾಟ ಮಾಡಲಾಗುವುದು.
ನಿರೀಕ್ಷಿತ ಬಿಡ್‌ದಾರ(ರು) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಅರ್ಮದಲೆ, ವೈಟ್‌ಫಿಲ್ಡ್ ಮೇನ್ ರೋಡ, ವೈಟ್‌ಫಿಲ್ಡ್, ಬೆಂಗಳೂರು** - 560066 ಇಲ್ಲಿ ಭದ್ರತಾ ಠೇವಣಿ ಮೊತ್ತವನ್ನು (ಇಎಂಡಿ) ಆರ್‌ಟಿಜಿಎಸ್ / ಡಿಮ್ಯಾಂಡ್ ಡ್ರಾಫ್ಟ್(ಡಿಡಿ)(ಕಾಲಂ ಇ ಅನ್ನು ಪರಿಶೀಲಿಸಿ) ಅನ್ನು **ಡಿಸೆಂಬರ್** 18, 2023 **ಸಂಜೆ 4.00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕು. ನಿರೀಕ್ಷಿತ ಬಿಡ್‌ದಾರ(ರು) ನೊಂದಣಿ ಫಾರ್ಮ್ ಮತ್ತು ಬಿಡ್ ಷರತ್ತುಗಳು ಮತ್ತು ನಿಬಂಧನೆಗಳ ಫಾರ್ಮ್ ಸಹಿ ಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಅರ್ಮದಲೆ, ವೈಟ್‌ಫಿಲ್ಡ್ ಮೇನ್ ರೋಡ, ವೈಟ್‌ಫಿಲ್ಡ್, ಬೆಂಗಳೂರು** - 560066 ಇಲ್ಲಿಗೆ **ಡಿಸೆಂಬರ್** 18, 2023 ರಂದು **ಸಂಜೆ 5.00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿ ಜಮಾವನ್ನು ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಅನ್ನು ರಾಷ್ಟ್ರೀಕೃತ /ಷಡ್ಯೂಲ್ಡ್ ಬ್ಯಾಂಕ್ ಮೂಲಕ **''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., - ಆಕ್ಷನ್''** ಎಂಬುವರ ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್(ಡಿಡಿ) ಯನ್ನು **ಹುಬ್ಬಳ್ಳಿಯಲ್ಲಿ** ಪಾವತಿಸುವಂತೆ ಪಡೆದು ಸಲ್ಲಿಸಬೇಕು.
ಈ ಹರಾಜಿನ ಸ್ವತ್ತಿನ ಪರಿಶೀಲನೆ, ನಿಯಮ ಮತ್ತು ಷರತ್ತುಗಳಿಗೆ ಅಥವಾ ಟೆಂಡರ್ ಸಲ್ಲಿಸುವ ಬಗ್ಗೆ ಇನ್ನಷ್ಟು ಯಾವುದೇ ಸ್ಪಷ್ಟೀಕರಣಗಳು ಬೇಕಾದಲ್ಲಿ ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ರವರನ್ನು** 022-69974300 ಅಥವಾ ನಮ್ಮ **ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರರಾದ ನೆಕ್ಸನ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್** ಅವರನ್ನು ಸಂಪರ್ಕಿಸಬಹುದು.
ಇನ್ನಷ್ಟು ಯಾವುದೇ ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನೂ ತಿರಸ್ಕರಿಸುವ ಹಕ್ಕು ಬ್ಯಾಂಕಿನ ಅಧೀಕೃತ ಅಧಿಕಾರಿಯವರು ಹೊಂದಿರುತ್ತಾರೆ.
ಈ ಮಾರಾಟದ ವಿವರವಾದ ಷರತ್ತು ಹಾಗೂ ನಿಯಮಗಳಿಗೆ ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು.
ದಿನಾಂಕ : ಡಿಸೆಂಬರ್ 01, 2023
ಸ್ಥಳ : ಹುಬ್ಬಳ್ಳಿ
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ಧಾರವಾಡದ ರಾಜೀವ ಗಾಂಧಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಗುರುವಾರ ದಾಸಶ್ರೇಷ್ಠ ಕನಕದಾಸ ಜಯಂತಿ ಆಚರಿಸಲಾಯಿತು. ಮುಖ್ಯಾಧ್ಯಾಪಕಿ ವೀಣಾ ತುಪ್ಪದ, ಸುಧಾ ಕಾಳೆ, ಮಮ್ತಾಜ್ ಖಾಜಿ, ವಿಶಾಲಾಕ್ಷಿ ಕುಂದಗೋಳ, ಶ್ರೀದೇವಿ ಕೆ.ಜಿ., ಮಧುಮತಿ ಗೌರವ್, ಸ್ಮಿತಾ ಸದಾನಂದ, ಇತರರಿದ್ದರು.

ಶ್ರೀ ರುದ್ರಾಕ್ಷಿಮಠದಲ್ಲಿ ಶ್ರೀ ನಿಜಗುಣ ಶಿವಯೋಗಿಗಳವರ 75ನೇ ವಾರ್ಷಿಕ ಜಯಂತಿ ಉತ್ಸವ,
ಶ್ರೀ ಬಸವಲಿಂಗೇಶ್ವರ ದೀಪೋತ್ಸವ ಹಾಗೂ
ಶ್ರೀ ಬಸವಲಿಂಗ ಸ್ವಾಮಿಗಳ ಷಷ್ಠಬ್ದಿ ಸಮಾರಂಭ
ದಿನಾಂಕ : 28-11-2023 ರಿಂದ 6-12-2023 ರವರೆಗೆ | ಸ್ಥಳ : ರುದ್ರಾಕ್ಷಿಮಠ, ಮಂಗಳವಾರಪೇಟ, ಹುಬ್ಬಳ್ಳಿ

ಹುಬ್ಬಳ್ಳಿ ರುದ್ರಾಕ್ಷಿ ಮಠದಲ್ಲಿ ಆಯೋಜಿಸಿರುವ ಶ್ರೀ ನಿಜಗುಣ ಶಿವಯೋಗಿಗಳವರ 75ನೇ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ಗುರುವಾರ ಮಾಜಿ ಸಿಎಂ ಜಗದೀಶ ಶೆಟ್ಟರ್ ಮಾತನಾಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶ್ರೀ ಬಸವಲಿಂಗ ಸ್ವಾಮೀಜಿ, ಶ್ರೀ ಅಭಿನವ ರೇವಣಸಿದ್ಧ ಸ್ವಾಮೀಜಿ, ಶ್ರೀ ಅಭಿನವ ಬಸವಲಿಂಗ ಸ್ವಾಮೀಜಿ, ಮಲ್ಲಿಕಾರ್ಜುನ ಸಾವಕಾರ, ಇತರರು ಇದ್ದರು.

75 ವರ್ಷಗಳನ್ನು ಪೂರೈಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಧಾರವಾಡದಲ್ಲಿ ಹುಬ್ಬಳ್ಳಿಯ ದಿಗಂಬರ ಜೈನ್ ಸಮಾಜದವರು ಭೇಟಿ ಮಾಡಿ ಆಶೀರ್ವಾದ ಪಡೆದರು. ಸಮಾಜದ ಅಧ್ಯಕ್ಷ ರಾಜೇಂದ್ರ ಬೀಳಗಿ, ವಿಮಲ ತಾಳಿಕೋಟಿ, ಶ್ರೇಣಿಕ ರಾಜಮಾನೆ, ಎಸ್.ಆರ್. ಹೊಸಮನಿ, ಸುಹಾಸ ಜವಳಿ, ಆರ್.ಟಿ. ತವನಪ್ಪನವರ, ಸುಭಾಸ ಅಕ್ಕಿ, ಇತರರು ಇದ್ದರು.

ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ವಿಜಯಲಕ್ಷ್ಮೀ ಗೇರ್ಸ್ ಕಂಪನಿಯ ಕಿಶೋರ ಕೌಶಲ ಕೇಂದ್ರ ಹಾಗೂ ಗದಗನ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನ ನಡುವೆ ವಿದ್ಯಾರ್ಥಿಗಳ ಇಂಟರ್ನ್‌ಶಿಪ್‌ಗಾಗಿ ಇತ್ತೀಚೆಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಕೌಶಲ ಕೇಂದ್ರದ ಸತೀಶ ನಾಡಗೇರ, ಸೋಮನಾಥ ಚವ್ಹಾಣ, ಕಾಲೇಜಿನ ಡಾ. ಎಚ್. ಮಧುಸೂಧನ, ಇತರರು ಉಪಸ್ಥಿತರಿದ್ದರು.

ಸಾರ್ವಜನಿಕ ತಿಳುವಳಿಕೆ ನೋಟೀಸು

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಯಾವತ್ತೂ ಸಾರ್ವಜನಿಕರಿಗೆ ಕೊಡುವ ತಿಳುವಳಿಕೆ ನೋಟೀಸು ಏನೆಂದರೆ:–

ನಮ್ಮ ಪಕ್ಷಗಾರರು ಜಿ:ತಾ: ಧಾರವಾಡ, ಹೋಬಳಿ: ಅಮ್ಮಿನಭಾವಿ, ಹೆಬ್ಬಳ್ಳಿ ಗ್ರಾಮದ ಸರ್ವೆ ನಂ: 349*, ಹಿಸ್ಸಾ: 3 ಒಟ್ಟು ಕ್ಷೇತ್ರ : 4ಎಕರೆ ನೇದ್ದರ ಮಾಲೀಕರಾದ ಶ್ರೀ ಈರಣ್ಣ ತಂದೆ ರತ್ನಪ್ಪ ಶಿವಳ್ಳಿ ಇವರಿಂದ ನಮ್ಮ ಪಕ್ಷಗಾರರು ಖರೀದಿ ಸಂಚಗಾರ ಮಾಡಿ ಕೊಳ್ಳುವವರಿದ್ದಾರೆ, ಕಾರಣ ಈ ಆಸ್ತಿಯ ಬಗ್ಗೆ ಎನಾದರೂ ಯಾವುದೇ ತರಹದ ಹಕ್ಕು, ಹಿತಸಂಬಂಧ ವ ಋಣಭಾರಗಳನ್ನು ಹೊಂದಿದಲ್ಲಿ, ಈ ಪತ್ರಿಕಾ ಪ್ರಕಟಣೆಯಾದ ದಿನಾಂಕದಿಂದ 07 ದಿನಗಳ ಒಳಗಾಗಿ ಅವಶ್ಯಕ ದಾಖಲೆಗಳೊಂದಿಗೆ ಕೆಳಕಾಣಿಸಿದ ನಮ್ಮ ವಿಳಾಸಕ್ಕೆ ಲಿಖಿತ ತಕರಾರುಗಳನ್ನು ಸಲ್ಲಿಸ ತಕ್ಕದ್ದು, ತಪ್ಪಿದಲ್ಲಿ ಸದರಿ ಆಸ್ತಿಯನ್ನು ನಮ್ಮ ಪಕ್ಷಗಾರರು ಕಾಯ್ದೆಶೀರ ನೋಂದ ಖರೀದಿ ಸಂಚಗಾರ ಮಾಡಿಕೊಳ್ಳುತ್ತಾರೆ. ತದನಂತರ ಬಂದ ಯಾವುದೇ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲು ಬರಲಾರದು ತಿಳಿಯಿರಿ, ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.

ರಾಜು ಕೋಟಿ ವಕೀಲರು,
ಮಾಳಾಪುರ, ಧಾರವಾಡ.
ಮೊ : 9844201164
ಧಾರವಾಡ
30–11–2023

ರೈತರಿಂದ ಅರ್ಜಿ ಆಹ್ವಾನ

ಧಾರವಾಡ: ಕೃಷಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಸೂಕ್ಷ್ಮ ನೀರಾವರಿ ಯೋಜನೆಯಡಿ ಶೇ. 90ರ ಸಹಾಯಧನದಲ್ಲಿ ತುಂತುರು ನೀರಾವರಿ ಘಟಕಗಳನ್ನು ಅಳವಡಿಸಿಕೊಳ್ಳಲು ಸಣ್ಣ, ಅತೀ ಸಣ್ಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಆಧಾರ ಕಾರ್ಡ್, ನೀರಾವರಿ ಪ್ರಮಾಣ ಪತ್ರ, ಪಹಣಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇದ್ದಲ್ಲಿ (ಜಾತಿ ಪ್ರಮಾಣ ಪತ್ರ), 20 ರೂ. ಛಾಪಾ ಕಾಗದದ (ನೋಟರಿಯೊಂದಿಗೆ) ಬ್ಯಾಂಕ್ ಪಾಸ್‌ಬುಕ್, ಆರ್‌ಟಿಜಿಎಸ್ ದಾಖಲಾತಿಗಳೊಂದಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ ಯೋಜನೆ ಸದುಪಯೋಗ ಪಡೆದುಕೊಳ್ಳಬೇಕು.

ಕಳೆದ 7 ವರ್ಷದ ಅವಧಿಯಲ್ಲಿ ತುಂತುರು ನೀರಾವರಿ ಘಟಕ ಪಡೆಯದ ರೈತರು ಮಾತ್ರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಕಿರಣಕುಮಾರ ಎಂ. ತಿಳಿಸಿದ್ದಾರೆ.

ಸಂವಿಧಾನ ದಿನ ಆಚರಣೆ

ಹುಬ್ಬಳ್ಳಿ: ಇಲ್ಲಿಯ ರೈಲ್ವೆ ಸ್ಟೇಷನ್ ರಸ್ತೆಯ ಡಾ. ಅಂಬೇಡ್ಕರ್ ಪ್ರತಿಮೆ ಬಳಿ ಆಮ್ ಆದ್ಮಿ ಪಕ್ಷದಿಂದ ಇತ್ತೀಚೆಗೆ ರಾಷ್ಟ್ರೀಯ ಸಂವಿಧಾನ ದಿನ ಹಾಗೂ ಪಕ್ಷದ ಸಂಸ್ಥಾಪನಾ ದಿನ ಆಚರಿಸಲಾಯಿತು. ಹು-ಧಾ ಸ್ಮಾರ್ಟ್ ಸಿಟಿ ಯೋಜನೆಯಡಿ ನಡೆದಿರುವ ಭ್ರಷ್ಟಾಚಾರ ಬಯಲಿಗೆಳೆಯುತ್ತೇವೆ ಎಂದು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಸಂವಿಧಾನ ಪೀಠಿಕೆಯ ಸಾಕ್ಷಿಯಾಗಿ ಪ್ರಮಾಣ ಮಾಡಿದರು. ಸ್ಮಾರ್ಟ್ ಸಿಟಿ ಮಿಷನ್‌ನ ಜಾಲತಾಣದಲ್ಲಿ ಪ್ರಕಟಿಸಿದಂತೆ ಸಾವಿರ ಕೋಟಿ ರೂ. ಅನುದಾನದಲ್ಲಿ ಹು-ಧಾ ಅವಳಿ ನಗರದಲ್ಲಿ 62 ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 612 ಕೋಟಿ ರೂ. ವೆಚ್ಚದಲ್ಲಿ 57 ಕಾಮಗಾರಿ ಪೂರ್ಣಗೊಳಿಸಲಾಗಿದೆ. ಇದರಲ್ಲಿ ಬಹಳಷ್ಟು ಕಾಮಗಾರಿಗಳು ಕಳಪೆಯಾಗಿವೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಪ್ರವೀಣಕುಮಾರ ನಡಕಟ್ಟಿನ ಹೇಳಿದರು. ರೇವಣಸಿದ್ದಪ್ಪ ಹುಬ್ಬಳ್ಳಿ, ಶಾಮ ನರಗುಂದ, ಪ್ರತಿಭಾ ದಿವಾಕರ, ಎಂ.ಬಿ. ಹಿರೇಮಠ, ಹುಸೇನಸಾಬ ತಳೇವಾಡ, ಅವಿನಾಶ ಸದಾನಂದ, ಫಾರೂಖ ಶೇಖ್, ತಸ್ಮೀನ ತಳೇವಾಡ, ಪದ್ಮಾ ಹುಬ್ಳಿಕರ, ಇತರರಿದ್ದರು.

ಶಿವಗಣಾರಾಧನೆ

ಶ್ರೀ ಕುಶಾಲಗೌಡ (ಬಾಬು) ಛಾಯನಗೌಡ ರಾಯನಗೌಡ್ರ (61)
ಸಾ|| ವಿಜಯನಗರ, ಹುಬ್ಬಳ್ಳಿ

ಇವರು ದಿನಾಂಕ 28-11-2023ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಶಿವಗಣಾರಾಧನೆಯನ್ನು ದಿನಾಂಕ 02-12-2023ರಂದು ಶನಿವಾರದಂದು ವಿಜಯನಗರ ಹುಬ್ಬಳ್ಳಿಯ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತ
ಪತ್ನಿ : **ಶೋಭಾ ಕೋಂ ಕು. ರಾಯನಗೌಡ್ರ,**
ಮಗಳು : **ಶಿಲ್ಪಾ**, ಮಗ : **ನವೀನ** ಹಾಗೂ
ಅಪಾರ ಬಂಧು-ಬಳಗ. ಮೊ: 9035389268

ICICI Home Finance | **ಕಾರ್ಪೊರೇಟ್ ಕಚೇರಿ:** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ(ಪೂರ್ವ), ಮುಂಬೈ -400059, ಭಾರತ
ಶಾಖಾ ವಿಳಾಸ: 2ನೇ ಮಹಡಿ, ಆರ್.ಡಿ. ಬದ್ದಿ ಮ್ಯಾನ್ಶನ್, ಕೊಟಕ್ ಬ್ಯಾಂಕ್ ಮೆಲ್ಗಡೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರೋಡ್, ಹುಬ್ಬಳ್ಳಿ- 580029
(ನಿಯಮ 8 (6) ರ ನಿಬಂಧನೆ ನೋಡಿ)
ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ನೋಟಿಸ್
ಹಣಕಾಸು ಆಸ್ತಿಗಳ ಸಂರಕ್ಷಣೆ ಮತ್ತು ಪುನರ್‌ರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ಮತ್ತು ನಿಯಮ 8(6) ಜೊತೆ ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ರಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸ್.
ಈ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಮುಖವಾಗಿ ಕೆಳಗೆ ಸೂಚಿಸಿರುವ ಸಾಲಗಾರ(ರು) ಮತ್ತು ಜಾಮೀನುದಾರ(ರು) ರಿಗೆ ಪ್ರಕಟಣೆ ನೀಡುವುದೇನೆಂದರೆ ಈ ಕೆಳಗೆ ಸೂಚಿಸಿರುವ ಸ್ಥಿರ ಸ್ವತ್ತುಗಳನ್ನು ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ/ಹೊಣೆ ಯಾಗಿದ್ದು, ಐಸಿಐಸಿಐ ಹೊಂ ಫಿನಾನ್ಸ್ ಕಂಪನಿ ಲಿ., ರವರ ಅಧೀಕೃತ ಅಧಿಕಾರಿಯವರು **ಸಾಂಕೇತಿಕ ಸ್ವಾಧೀನ** ಹಂತದನುಸಾರ ಸ್ವಾಧೀನ ಪಡೆದುಕೊಂಡು, ಸದರೀ ಸ್ವತ್ತನ್ನು ''ಯಾವುದು ಆಧಾರ ವಾಗಿದೆಯೋ ಅದು'', ''ಏನು ಇದೆಯೋ ಅದು'', ''ಯಾವುಗಳು ಇದೆಯೋ ಅವುಗಳು'' ಆಧಾರದ ಮೇಲೆ ಈ ಕೆಳಗಿನ ಸಂಕ್ಷಿಪ್ತ ವಿವರಗಳಂತೆ ಮಾರಾಟ ಮಾಡಲಾಗುವುದೆಂದು ಪ್ರಕಟಣೆ ನೀಡಲಾಗಿದೆ.

ಕ್ರ. ಸಂ	ಸಾಲಗಾರ(ರು)/ಸಹ-ಸಾಲಗಾರರು/ ಜಾಮೀನುದಾರರ/ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲ ಖಾತೆ ಸಂ.	ಋಣಭಾರಗಳೊಂದಿಗೆ, ಯಾವುದಾದರೂ ಇದ್ದಲ್ಲಿ ಭದ್ರತಾ ಆಸ್ತಿ(ಗಳ) ವಿವರಗಳು	ಬಾಕಿ ಮೊತ್ತ	ಮೀಸಲು ಬೆಲೆ ಭದ್ರತಾ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(A)	(B)	(C)	(D)	(E)	(F)	(G)
1.	ವೆಂಕಟೇಶ ತಮ್ಮಣ್ಣ ಮಳಲಿ (ಸಾಲಗಾರ) ವಿಜಲಯಲಕ್ಷ್ಮೀ ಜಿ ಪಾಟೀಲ (ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ LHHBL00001353534	ಶಾರದಾ ಅಪಾರ್ಟ್‌ಮೆಂಟ್ ಲಿಂಗರಾಜ ನಗರ ಉಣಕಲ್ ಹುಬ್ಬಳ್ಳಿ ಸಿಟಿಎಸ್ ನಂ. 3518 ಬಿ/6 ಎ ಹುಬ್ಬಳ್ಳಿ ಕರ್ನಾಟಕ-580030	ರೂ. 59,60,158/- ನವೆಂಬರ್ 23, 2023	ರೂ. 50,51,970/- ರೂ. 5,05,200/-	ಡಿಸೆಂಬರ್ 11, 2023 ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	ಡಿಸೆಂಬರ್ 19, 2023 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ
2.	ತಮ್ಮಣ್ಣ ಈಶ್ವರಪ್ಪ ಹುಣಸಿಮರದ (ಸಾಲಗಾರ) ಸುಶೀಲಾ ತಮ್ಮಣ್ಣ ಹುಣಸಿಮರದ (ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ LHHBL00001327272	ಪಿಐಡಿ ಸಂ. 3/1616 , ಹೊಸ ಓಣಿ ಯತ್ತಿನಗುಡ್ಡ ಗ್ರಾಮ, ವಾರ್ಡ್ ನಂ. 3, ಮುನಸಿಪಲ್ ಅಸೆಸ್‌ಮೆಂಟ್ ನಂ. 91/11 ಧಾರವಾಡ	ರೂ. 12,36,984/- ನವೆಂಬರ್ 23, 2023	ರೂ. 7,41,830/- ರೂ. 74,190/-	ಡಿಸೆಂಬರ್ 11, 2023 ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	ಡಿಸೆಂಬರ್ 19, 2023 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ

ಆನ್‌ಲೈನ್ ಹರಾಜನ್ನು ವೆಬ್‌ಸೈಟ್ ನಮ್ಮ ಹಾರಾಜಿನ ಏಜನ್ಸಿಯವರಾದ **ಗ್ಲೋಬ್‌ಟೆಕ್** ರವರ (URL Link-https://BestAuctionDeal.com) ಮೂಲಕ ನಡೆಸಲಾಗುವುದು. ಅಡಮಾನದಾರರಿಗೆ / **ಡಿಸೆಂಬರ್** 18, 2023 ರಂದು **ಸಂಜೆ 5.00 ಗಂಟೆಯೊಳಗೆ** ತಿಳಿಸಿರುವ ಒಟ್ಟಾರೆ ಬಾಕಿ ಮೊತ್ತವನ್ನು ಪಾವತಿಸಲು ಅಡಮಾನದಾರರಿಗೆ ಒಂದು ಅಂತಿಮ ಅವಕಾಶವನ್ನು ನೀಡಲಾಗಿದೆ. ಇಲ್ಲವಾದಲ್ಲಿ ಮೇಲಿನ ವೇಳಾ ಪಟ್ಟಿಯಂತೆ ಈ ಸದರಿ ಸ್ವತ್ತನ್ನು ಮಾರಾಟ ಮಾಡಲಾಗುವುದು.
ನಿರೀಕ್ಷಿತ ಬಿಡ್‌ದಾರ(ರು) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಆರ್.ಡಿ. ಬದ್ದಿ ಮ್ಯಾನ್ಶನ್, ಕೊಟಕ್ ಬ್ಯಾಂಕ್ ಮೆಲ್ಗಡೆ, ಧಾರವಾಡ ಹುಬ್ಬಳ್ಳಿ** 123, **ಡಿ ಕ್ಲಬ್ ರೋಡ್, ಹುಬ್ಬಳ್ಳಿ**- 580029 ಇಲ್ಲಿ ಭದ್ರತಾ ಠೇವಣಿ ಮೊತ್ತವನ್ನು (ಇಎಂಡಿ) ಆರ್‌ಟಿಜಿಎಸ್ / ಡಿಮ್ಯಾಂಡ್ ಡ್ರಾಫ್ಟ್(ಡಿಡಿ)(ಕಾಲಂ ಇ ಅನ್ನು ಪರಿಶೀಲಿಸಿ) ಅನ್ನು **ಡಿಸೆಂಬರ್** 18, 2023 **ಸಂಜೆ 4.00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕು. ನಿರೀಕ್ಷಿತ ಬಿಡ್‌ದಾರ(ರು) ನೊಂದಣಿ ಫಾರ್ಮ್ ಮತ್ತು ಬಿಡ್ ಷರತ್ತುಗಳು ಮತ್ತು ನಿಬಂಧನೆಗಳ ಫಾರ್ಮ್ ಸಹಿ ಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಆರ್.ಡಿ. ಬದ್ದಿ ಮ್ಯಾನ್ಶನ್, ಕೊಟಕ್ ಬ್ಯಾಂಕ್ ಮೆಲ್ಗಡೆ, ಧಾರವಾಡ ಹುಬ್ಬಳ್ಳಿ** 123, **ಡಿ ಕ್ಲಬ್ ರೋಡ್, ಹುಬ್ಬಳ್ಳಿ**- 580029 ಇಲ್ಲಿಗೆ **ಡಿಸೆಂಬರ್** 18, 2023 ರಂದು **ಸಂಜೆ 5.00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿ ಜಮಾವನ್ನು ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಅನ್ನು ರಾಷ್ಟ್ರೀಕೃತ /ಷಡ್ಯೂಲ್ಡ್ ಬ್ಯಾಂಕ್ ಮೂಲಕ **''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., - ಆಕ್ಷನ್''** ಎಂಬುವರ ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್(ಡಿಡಿ) ಯನ್ನು **ಹುಬ್ಬಳ್ಳಿ, ಧಾರವಾಡದಲ್ಲಿ** ಪಾವತಿಸುವಂತೆ ಪಡೆದು ಸಲ್ಲಿಸಬೇಕು.
ಈ ಹರಾಜಿನ ಸ್ವತ್ತಿನ ಪರಿಶೀಲನೆ, ನಿಯಮ ಮತ್ತು ಷರತ್ತುಗಳಿಗೆ ಅಥವಾ ಟೆಂಡರ್ ಸಲ್ಲಿಸುವ ಬಗ್ಗೆ ಇನ್ನಷ್ಟು ಯಾವುದೇ ಸ್ಪಷ್ಟೀಕರಣಗಳು ಬೇಕಾದಲ್ಲಿ ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ರವರನ್ನು** 022-69974300 ಅಥವಾ ನಮ್ಮ **ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರರಾದ ನೆಕ್ಸನ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್** ಅವರನ್ನು ಸಂಪರ್ಕಿಸಬಹುದು.
ಇನ್ನಷ್ಟು ಯಾವುದೇ ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನೂ ತಿರಸ್ಕರಿಸುವ ಹಕ್ಕು ಬ್ಯಾಂಕಿನ ಅಧೀಕೃತ ಅಧಿಕಾರಿಯವರು ಹೊಂದಿರುತ್ತಾರೆ.
ಈ ಮಾರಾಟದ ವಿವರವಾದ ಷರತ್ತು ಹಾಗೂ ನಿಯಮಗಳಿಗೆ ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು.
ದಿನಾಂಕ : ಡಿಸೆಂಬರ್ 01, 2023
ಸ್ಥಳ : ಹುಬ್ಬಳ್ಳಿ, ಧಾರವಾಡ
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

29ನೇ ಪುಣ್ಯಸ್ಮರಣೆ | 6ನೇ ಪುಣ್ಯಸ್ಮರಣೆ

ಶ್ರೀ ಗಂಗಾಧರ ಕೆ. ಬೆಕ್ಕಿನಕೇರಿ
(ಮರಣ ದಿ. 01/12/1994)

ಶ್ರೀಮತಿ ಪಾರ್ವತಿ ಗಂಗಾಧರ ಬೆಕ್ಕಿನಕೇರಿ
(ಮರಣ ದಿ. 25/04/2017)

ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ಮುನ್ನಡೆಯುತ್ತಿದ್ದು, ನಿಮ್ಮ ಸರಳವಾದ ಆದರ್ಶ (ಜೀವನ) ನೀವು ತೋರಿದ ಪ್ರೀತಿ ವಾತ್ಸಲ್ಯ ನಮಗೆ ದಾರಿದೀಪವಾಗಿದೆ. ಪರಮಾತ್ಮನು ಇವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ಶ್ರೀ ಬಾಬು ಬನಾಜಿ ಮತ್ತು ಶ್ರೀ ಅಶೋಕ ಬೆಕ್ಕಿನಕೇರಿ
ಪರಿವಾರದವರು, ಖಡಕಗಲ್ಲಿ ಬೆಳಗಾವಿ.


ವಿಜಯವಾಣಿ ನಂ.1 ಕನ್ನಡ ದಿನ ಪತ್ರಿಕೆ
ಜನವರಿ JANUARY 2024
VRL MEDIA PVT LTD
₹ 40/-
YOUNG MILLENNIALS PREFERRED CHOICE
VIJAYAVANI KANNADA DAILY
Making us the most preferred Newspaper for Educational Institutions
ಮಹಿಳೆಯರ ನಿತ್ಯದ ಸಂಗಾತಿ
ಮಹಿಳೆಯರ ದನಿಯನ್ನು ಪ್ರತಿಬಿಂಬಿಸುವ ಪತ್ರಿಕೆ
www.vijayavani.net

ನಂ.1 ಕನ್ನಡ ದಿನ ಪತ್ರಿಕೆ
ವಿಜಯವಾಣಿ
ಹೊಸ ವರ್ಷದ
ವಿಜಯವಾಣಿ ಕ್ಯಾಲೆಂಡರ್
ನಿಮ್ಮ ಮನೆ - ಮನದಲ್ಲಿ
ಶೀಘ್ರದಲ್ಲೇ ಮಾರುಕಟ್ಟೆಯಲ್ಲಿ ಲಭ್ಯ
♦ ಸಮಗ್ರ ಮಾಹಿತಿ ಆಕರ್ಷಕ ವಿನ್ಯಾಸ ♦ ವರ್ಷ ಪೂರ್ತಿ ನಾಡಿನ ಮೂಲೆ ಮೂಲೆಯಲ್ಲಿ ನಡೆಯುವ ಎಲ್ಲಾ ಪ್ರಮುಖ ಜಾತ್ರೆಗಳು, ರಥೋತ್ಸವಗಳು, ಪ್ರಮುಖ ಹಬ್ಬ ಹರಿದಿನಗಳು, ವಿವಿಧ ಆಚರಣೆಗಳ ಸಂಪೂರ್ಣ ಚಿತ್ರಣ
♦ ನಾಡಿನ ಪ್ರಮುಖರು, ಸಂತರು, ಸ್ವಾತಂತ್ರ್ಯ ಹೋರಾಟಗಾರರ ಜನ್ಮದಿನ, ಸ್ಮರಣೆಯ ಮಾಹಿತಿ
♦ ರಾಶಿ, ನಕ್ಷತ್ರ ಫಲ, ವಾಸ್ತುಪುರುಷನ ಸಂಚಾರ, ಶುಭಕಾರ್ಯಗಳ ಮುಹೂರ್ತ, ಮತ್ತಿತರ ಆಧ್ಯಾತ್ಮಿಕ ವಿಚಾರಗಳ ನಿಖರ ಮಾಹಿತಿ
ವಿಜಯವಾಣಿ ದಿನದರ್ಶಿಕೆ - ನಿಮ್ಮ ಅನುದಿನದ ದಿಕ್ಸೂಚಿ
ಬೆಲೆ ₹40/-
*Source: Average Combined Circulation for All Edition ABC July-Dec. 2022
CIN: U92113KA2007PTC043480
ಕ್ಯಾಲೆಂಡರ್ ಪ್ರತಿಗಳ ಖರೀದಿಗಾಗಿ ಇಂದೇ ಸಂಪರ್ಕಿಸಿ
ವಿಜಯವಾಣಿ
ಹುಬ್ಬಳ್ಳಿ : 8884432660, ಧಾರವಾಡ : 8884431937,
ಕಾರವಾರ : 8884432415,
ಹಾವೇರಿ : 8884432416, ಗದಗ : 8884432155